ದಿನಾಂಕ: 14.03.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು : ವಾದಿ ಪರ ಶ್ರೀ.ಎಮ್.ಎಚ್.ಕೆ.ವಕೀಲರಿಂದ**

ದಾವಾದ ಜಮೀನು ಸರ್ವೆ ನಂ. 292 ಮತ್ತು 296 ಇರುತ್ತದೆ. ಸದರಿ ಜಮೀನು ಮಸೂತಿಯಲ್ಲಿ ಇರುತ್ತದೆ. ಸರ್ವೆ ನಂ. 292 ರ ಹಳೆ ಸರ್ವೆ ನಂಬರ ನೆನಪಿಲ್ಲ. ಅದೇ ರೀತಿ ಸರ್ವೆ ನಂ. 296 ರ ಹಳೆ ಸರ್ವೆ ನಂಬರ ನೆನಪಿಲ್ಲ. ಸರ್ವೆ ನಂ. 292 ಕನಸಾಲಿಡೆಟಡ್ ನಂಬರ ಸರ್ವೆ ನಂ. 178 ಮತ್ತು ಸರ್ವೆ ನಂ. 296 ರ ಕನಸಾಲಿಡೆಟಡ್ ನಂಬರ ಸರ್ವೆ ನಂ.175 ಇತ್ತು ಎಂದರೆ ಸಾಕ್ಷಿಯು ಇರಬಹುದು. ಸರ್ವೆ ನಂ. 292 ರ ಕ್ಷೇತ್ರ 17-ಎಕರೆ 34-ಗುಂಟೆ ಇರುತ್ತದೆ. ಸರ್ವೆ ನಂ. 296 ರ ಕ್ಷೇತ್ರ 16-ಎಕರೆ 03-ಗುಂಟೆ ಇರುತ್ತದೆ. ಎರಡು ಜಮೀನುಗಳ ಮೂಲವಾಗಿ ಹುಸೇನಮಾ ಗಂಡ ಮಿರ್ಜಾಬೇಗ ಮುಲ್ಲರವರಿಗೆ ಸೇರಿದ್ದು ಎಂದರೆ ಸರಿ. ಹುಸೇನಮಾ ಎನ್ನುವವರಿಗೆ ಒಬ್ಬಳೆ ಮಗಳು ಖಾತುನಬಿ ಎಂದರೆ ಸರಿ. ಖಾತುನಬಿ ಗಂಡ ಹುಸೇನಸಾಬ ದಫೇದಾರ ಎಂದರೆ ಸರಿ. ಹುಸೇನಸಾಬ ಮತ್ತು ಖಾತುಬನಬಿಯ ಮಕ್ಕಳು ಎಂದರೆ 1ನೇ ಪ್ರತಿವಾದಿಯ ತಂದೆ ಎಂದರೆ ಗೊತ್ತಿಲ್ಲ.

1 ಮತ್ತು 2 ನೇ ವಾದಿಯರು ಅಣ್ಣತಮ್ಮಂದಿರು ಎಂದರೆ ಗೊತ್ತಿಲ್ಲ. 1 ನೇ ಪ್ರತಿವಾದಿಯು 1 ನೇ ವಾದಿಯ ತಂದೆಯ ಸಹೋದರ ಎಂದರೆ ಗೊತ್ತಿಲ್ಲ. 3,4,5,6 ನೇ ಪ್ರತಿವಾದಿಯರು ಅಸದಖಾನರವರ ಮಕ್ಕಳು ಎಂದರೆ ಗೊತ್ತಿಲ್ಲ. ನೂರುದ್ದಿನ ಮೈನುದ್ದಿನ ಖಾಜಿ ನಮ್ಮ ಮಾಮಾನಗಬೇಕು. 7 ನೇ ಪ್ರತಿವಾದಿಯು ಯಾಶೀನಸಾಬ ಮುಲ್ಲಾರವರಿಗೆ ದತ್ತಕಕ್ಕೆ ಹೋಗಿದ್ದರು ಎಂದರೆ ಗೊತ್ತಿಲ್ಲ.

1941 ರಲ್ಲಿ ಯಾಶೀನಖಾನರವರಿಗೆ ಹಿಬಾಬುಲ ಇವಜ ದಾವಾ ಆಸ್ತಿ ಬಗ್ಗೆ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾಶೀನಖಾನ ಹುಸೇನಮಾಗೆ ಏನೂ ಆಗಬೇಕು ಎಂದರೆ ಸಂಬಂಧಿಕರು ಎಂದು ಉತ್ತರಿಸುತ್ತಾರೆ. ಯಾಶೀನಖಾನನಿಗೆ ಹುಸೇನಮಾಗೆ ಏನೂ ಸಂಬಂಧ ಇದೆ ಎಂದು ಹೇಳಲು ಬರುವುದಿಲ್ಲ. ಯಾಶೀನಖಾನ ಚಿಕ್ಕವನಿದ್ದಾಗ ತನ್ನ ತಂದೆ-ತಾಯಿಯನ್ನು ಕಳೆದುಕೊಂಡು ಪರದೇಶಿಯಾಗಿದ್ದ ಎಂದರೆ ಗೊತ್ತಿಲ್ಲ. ಅದಕ್ಕಾಗಿ ಖಾತುನಬಿ ಯಾಶೀನಖಾನನನ್ನು ಮಗನಂತೆ ನೋಡುತ್ತಿದ್ದಳು ಎಂದರೆ ಗೊತ್ತಿಲ್ಲ. ಅವರಿಗೆ ಯಾವುದೇ ರಕ್ತ ಸಂಬಂಧ ಇರಲಿಲ್ಲ ಎಂದರೆ ಸಂಬಂಧ ಇತ್ತು ಆದರೆ ಯಾವುದ ಸಂಬಂಧ ಇತ್ತು ಗೊತ್ತಿಲ್ಲ. ಹಿಬಾಬುಲ ಇವಜ

ಎಂದರೆ ಗೊತ್ತಿದೆ. ಸಾಕ್ಷಿಯು ಮುಂದುವರೆದು ಬಕ್ಷಿಸ ಎಂದು ಉತ್ತರಿಸುತ್ತಾರೆ. ಹಿಬಾಬುಕ ಇವಜನ್ನು ನೋಂದು ಮಾಡಿಕೊಟ್ಟಿರುತ್ತಾರೆ. ಸದರಿ ಹಿಬಾಬುಲ ಇವಜ ಹಾಜರ ಮಾಡಿದ್ದೇನೆ.

ಸಾಕ್ಷಿಗೆ ನಿ.ಡಿ.-9 ನ್ನು ತೋರಿಸಲಾಗಿ ಸರ್ವೆ ನಂ. 175 ಮತ್ತು 178 ರಲ್ಲಿ ½ ಹಿಸ್ಸೆ ಎಂದು ಬರೆದಿದ್ದಾರೆ ಎಂದರೆ ಸರಿ. ನಿ.ಡಿ.-9 ರ ಪ್ರಕಾರ ಹುಸೇನಮಾಗೆ ಸರ್ವೆ ನಂ. 175 ಮತ್ತು 178 ರಲ್ಲಿ ಅರ್ಧ ಹಿಸ್ಸೆ ಇದೆ ಎಂದು ಗೊತ್ತಾಗುತ್ತದೆ ಎಂದರೆ ಸರಿ. ಇನ್ನು ಅರ್ಧ ಹಿಸ್ಸೆ ಯಾರದ್ದು ಇತ್ತು ಎಂದರೆ ಸಾಕ್ಷಿಯು ಗೊತ್ತಿಲ್ಲ. ನಿ.ಡಿ. -9 ರ ಮೂಲ ಪ್ರತಿ ಎಲ್ಲಿ ಇದೆ ಎಂದು ಗೊತ್ತಿದೆಯಾ ಎಂದರೆ ಸಾಕ್ಷಿಯು ಹೇಳಲು ಬರುವುದಿಲ್ಲ ಎಂದು ಉತ್ತರಿಸುತ್ತಾರೆ. ಹುಸೇನಮಾ ನಿ.ಡಿ. -9 ನ್ನು ಮಾಡಿ ಕೊಟ್ಟಿಲ್ಲದಿದ್ದರು ಸಹ ಯಾಶೀನಖಾನ ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿ.ಡಿ. -9 ರ ಮೂಲ ಪ್ರತಿಯನ್ನು ಹಾಜರ ಪಡಿಸಿದರೆ ಸತ್ಯ ಸಂಗತಿ ಗೊತ್ತಗುತ್ತದೆ ಎಂಬ ಉದ್ದೇಶದಿಂದ ಹಾಜರ ಪಡಿಸಿಲ್ಲ ಎಂದರೆ ಸರಿಯಲ್ಲ. ನಿ.ಡಿ.-9 ರ ಪ್ರಕಾರ ಅರ್ಧ ಹಿಸ್ಸೆ ಬಗ್ಗೆ ಮಾಡಿರುತ್ತಾರೆ. ನಿ.ಡಿ. -9 ನ್ನು ಖೊಟ್ಟಿಯಾಗಿ ತಯಾರಿಸಿ ಹುಸೇನಮಾ ಖಾತುನಬಿಗೆ ಗೊತ್ತಾಗದೇ ಡ ನಂ. 729

ಮಾಡಿಕೊಂಡಿದ್ದಿರಿ ಎಂದರೆ ಸರಿಯಲ್ಲ. ಡ ನಂ. 402, 1477,1533,2300,2654,729 ನ್ನು ಖೊಟ್ಟಿಯಾಗಿ ಸೃಷ್ಟಿ ಮಾಡಿರುತ್ತಿರಿ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೂಲ ಮಾಲೀಕ ಹುಸೇನಮಾ ತೀರಿಕೊಂಡ ನಂತರ ಆತಳ ಒಬ್ಬಳೆ ಮಗಳಾದ ಖಾತುಬಿ ಮೂಲ ಮಾಲೀಕಳಾಗುತ್ತಾಳೆ ಎಂದರೆ ಸರಿಯಲ್ಲ. ಖಾತುಬಿ ತೀರಿಕೊಂಡ ನಂತರ ವಾದಿಯರು ಮತ್ತು 1 ರಿಂದ 6 ನೇ ಪ್ರತಿವಾದಿ ಅವಳ ವಾರಸುದಾರರು ಆಗುತ್ತಾರೆ ಎಂದರೆ ಸರಿಯಲ್ಲ. ಯಾಶೀನಖಾನ ನನಗೆ ಬಿಟ್ಟು ಕೊಟ್ಟ ನಂತರ 196 ರಲ್ಲಿ ಅಬ್ದುಲ ಅಜೀಜ್ ಮಾಲೀಕರಾಗುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಡ ನಂ. 2654 ರ ಪ್ರಕಾರ ಅಬ್ದುಲ ಅಜೀಜ ಮೈನುದ್ದಿನರವರಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೈನುದ್ದಿನ ತೀರಿಕೊಂಡ ನಂತರ ನೀವು ವಾರಸಾ ನಾತೆಯಿಂದ ಮಾಲೀಕರಾಗಿದ್ದಿರಿ ಎಂದು ಸುಳ್ಳು ಹೇಳಿ ಬರೆಯಿಸಿದ್ದಿರಿ ಎಂದರೆ ಸರಿಯಲ್ಲ. ಮೈನುದ್ದಿನ ತೀರಿಕೊಂಡ ನಂತರ ವಾರಸಾ ನಾತೆಯಿಂದ ಡ ನಂ. 5323 ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲೆ ಹೇಳಿ ದಂತಹ ಎಲ್ಲ ಡ

ನಂಬರಗಳನ್ನು ವಾದಿಯರಿಗೆ ಗೊತ್ತಾಗದೇ ರೆವೆನ್ಯು



ಅಧಿಕಾರಿಗೊಳಂದಿಗೆ ಶಾಮಿಲಾಗಿ ಸೃಷ್ಟಿಸಿಕೊಂಡಿರುತ್ತಿರಿ ಎಂದರೆ ಸರಿಯಲ್ಲ. ನಿ.ಡಿ.-9 ನ್ನು ಖೊಟ್ಟಿಯಾಗಿ ಸೃಷ್ಟಿ ಮಾಡಿರುತ್ತಿರಿ ಎಂದರೆ ಸರಿಯಲ್ಲ. ದಾವಾ ಜಮೀನಿಗೆ ನಿಮಗೆ ಸಂಬಂಧ ಇಲ್ಲದಿದ್ದರು ಸಹ ಖೊಟ್ಟಿ ಡ ಉತಾರೆಗಳನ್ನು ತಯಾರ ಮಾಡಿ ನಿಮ್ಮ ಹೆಸರುಗಳನ್ನು ಸೇರಿಸಿದ್ದಿರಿ ಎಂದರೆ ಸರಿಯಲ್ಲ. 8 ನೇ ಪ್ರತಿವಾದಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸಾಕ್ಷಿಯು ಇದೆ ಎಂದು ಉತ್ತರಿಸುತ್ತಾರೆ. ಸದರಿ ಜಮೀನುಗಳನ್ನು ಎನ್.ಟಿ.ಪಿ.ಸಿ.ಯವರು ಅಕ್ವಾರ ಮಾಡಿಕೊಂಡಿದ್ದಾರೆ ಎಂದರೆ ಸರಿ. ಇತ್ತಿಚಿಗೆ ಅಕ್ವಾರ ಮಾಡಿಕೊಂಡಿದ್ದಾರೆ ಎಂದರೆ ಸರಿ. ನೀವು ಮೋಸ ಮಾಡಿದ ವಿಷಯ ಎನ್.ಟಿ.ಪಿ.ಸಿಯವರು ನೋಟಿಸ ಬರಬೇಕಾಗಿತ್ತು ಯಾಕೆ ಬರೆಲಿಲ್ಲ ಎಂದು ವಿಚಾರಣೆ ಮಾಡಿದಾಗ ಗೊತ್ತಾಯಿತು ಎಂದರೆ ಸರಿಯಲ್ಲ. ವಾದಿಯ ದಾವೆಯು ಕಾಲ ಮಿತಿಯಲ್ಲಿ ಇದೆ ಎಂದರೆ ಸರಿಯಲ್ಲ.

**8 ಮತ್ತು 10 ನೇ ಪ್ರತಿವಾದಿ ಪರ ವಕೀಲರ ಕೋರಿಕೆ ಮೇರೆಗೆ ಸಾಕ್ಷಿಯು ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

ಹೆಚ್ಚುವರಿ ಹಿರಿಯ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ